1	2	3
ಖಾನಾಪೂರ	4	60.00
ರಾಮದುರ್ಗ	2	7.00
ಸವದತ್ತಿ	5	86.00
ಗೋಕಾಕ	4	100.34
ಚಿಕ್ಕೋಡಿ	7	65.00
ಅಥಣಿ	3	56.00
ರಾಯಭಾಗ	1	28.09
	35	**588.18**

ಆ) ಮತ್ತು ಇ) ಬೈಲ ಹೊಂಗಲ ತಾಲ್ಲೂಕಿನಲ್ಲಿ 2002–03ನೇ ಸಾಲಿನಲ್ಲಿ 2 ಕೆಲಸಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದು ಸರ್ವೆ ಕೆಲಸ ಪೂರ್ಣಗೊಂಡಿದೆ. ಇದರಲ್ಲಿ ಒಂದು ಕೆಲಸವನ್ನು ರೈತ ಕಾಯಕ ಕೆರೆ ಯೋಜನೆ ಅಡಿಯಲ್ಲಿ ಪ್ರಾರಂಭಿಸಲಾಗಿದೆ. ಸವದತ್ತಿ ತಾಲ್ಲೂಕಿನಲ್ಲಿ 2002–03ನೇ ಸಾಲಿಯ76ನಲ್ಲಿ 5 ಕೆಲಸಗಳನ್ನು ತೆಗೆದುಕೊಳ್ಳಲು ಉದ್ದೇಶಿಸಿದ್ದು, ಇದರಲ್ಲಿ 4 ಕೆಲಸಗಳ ಸರ್ವೆ ಕಾರ್ಯ ಪೂರ್ಣಗೊಂಡಿದೆ. ಇನ್ನೊಂದು ಕಾಮಗಾರಿಯನ್ನು ರೈತ ಕಾಯಕ ಕರೆ ಯೋಜನೆಯಡಿ ತೆಗೆದುಕೊಂಡಿದ್ದರಿಂದ ಸರ್ವೆಕಾರ್ಯ ಕೈಬಿಡಲಾಗಿದೆ.

ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಲಾಭ ಮತ್ತು ಹಾನಿ

2601(3429) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೆ.ಎಸ್.ಆರ್.ಟಿ.ಸಿ.ಯ ಘಟಕಗಳು ಇರುತ್ತವೆ;

ಆ) ಅವುಗಳಲ್ಲಿ ಎಷ್ಟು ಘಟಕಗಳು ಲಾಭದಲ್ಲಿರುತ್ತವೆ ಹಾಗೂ ಎಷ್ಟು ಘಟಕಗಳು ನಷ್ಟದಲ್ಲಿರುತ್ತವೆ;

ಇ) ನಷ್ಟದಲ್ಲಿರುವ ಘಟಕಗಳನ್ನು ಲಾಭದಾಯಕವನ್ನಾಗಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ)

ಸಾರಿಗೆ ಸಂಸ್ಥೆಯ ಒಟ್ಟು ಘಟಕಗಳು

1)	ಕ.ರಾ.ರ.ಸಾ.ಸಂ.	–	48
2)	ಬೆ.ಮ.ನ.ಸಾ.ಸಂ.	–	20
3)	ವಾ.ಕ.ರ.ಸಾ.ಸಂ.	–	46
4)	ಈ.ಕ.ರ.ಸಾ.ಸಂ.	–	27
	ಒಟ್ಟು	–	**141**

ಆ)

		ಲಾಭದಲ್ಲಿರುವ ಘಟಕಗಳು	ನಷ್ಟದಲ್ಲಿರುವ ಘಟಕಗಳು
1)	ಕ.ರಾ.ರ.ಸಾ.ಸಂ.	17	31
2)	ಬೆ.ಮ.ನ.ಸಾ.ಸಂ.	20	–
3)	ವಾ.ಕ.ರ.ಸಾ.ಸಂ.	31	15
4)	ಈ.ಕ.ರ.ಸಾ.ಸಂ.	01	26
	ಒಟ್ಟು	**69**	**72**

ಇ) ನಷ್ಟದಲ್ಲಿರುವ ಘಟಕಗಳ ಆದಾಯ ಗಳಿಕೆಯನ್ನು ಹೆಚ್ಚಿಸಲು ಮತ್ತು ವೆಚ್ಚವನ್ನು ನಿಯಂತ್ರಿಸಲು ಈ ಕೆಳಗಿನಂತೆ ಕ್ರಮ ಕೈಗೊಂಡು ಲಾಭದಾಯಕವನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ:

1. ಸೇವೆ ಖಾತರಿ ಸೌಲಭ್ಯವನ್ನು ಪ್ರಾರಂಭಿಸಲಾಗಿದೆ:

2. ಗ್ರಾಮಾಂತರ ಪ್ರದೇಶಗಳಲ್ಲಿ 2 ರಿಂದ 23ನೇ ಹಂತದವರೆಗಿನ ಪ್ರಯಾಣ ಮಾಡುವ ಪ್ರಯಾಣಿಕರಿಗೆ ಮಾಸಿಕ ಟಿಕೇಟುಗಳ ಸೌಲಭ್ಯವನ್ನು ಒದಗಿಸಲಾಗಿದೆ:

3. ಒಂದು ವಾರಕ್ಕೆ ಸೀಮಿತವಾದ ಸ್ವಾತಂತ್ರ್ಯ ಟಿಕೇಟುಗಳ (ಮನಬಂದಂತೆ ಪ್ರಯಾಣಿಸಬಹುದಾದ) ಸೌಲಭ್ಯವನ್ನು ಒದಗಿಸಲಾಗಿದೆ:

4. ರಾಜ್ಯದ ಮತ್ತು ನೆರೆ ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಖಾಸಗಿಯವರಿಂದ ಗಣಕೀಕೃತ/ ಕೈಯಿಂದ ಬರೆಯುವ ಮುಂಗಡ ಟಿಕೇಟು ಕೌಂಟರುಗಳನ್ನು ಪ್ರಾರಂಭಿಸಲಾಗಿದೆ:

5. ಆರಾಮದಾಯಕ ಪ್ರಯಾಣಕ್ಕೆ ಅನುಕೂಲವಾಗುವಂತೆ ವಾಹನಗಳನ್ನು ಹೊಸ ವಿನ್ಯಾಸಗೊಳಿಸುವುದು:

6. ಜನಸಂದಣೀ ಕಡಿಮೆಯಿರುವ ವೇಳೆಯಲ್ಲಿ ಸೇವೆಗಳನ್ನು ಕಡಿತಗೊಳಿಸುವುದು:

7. ನಿರ್ವಾಹಕ ರಹಿತ ಸೇವೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭಿಸುವುದು:

8. ವಾಣಿಜ್ಯ ಆದಾಯವನ್ನು ಹೆಚ್ಚಿಸುವುದು:

9. ಸಂಸ್ಥೆಯ ಕಾರ್ಯಾಚರಣೆ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ಖಾಸಗಿ ಪ್ರವರ್ತಕರಿಂದ ವಾಹನಗಳನ್ನು ಬಾಡಿಗೆಯಾಧಾರದ ಮೇಲೆ ಪಡೆಯಲಾಗುತ್ತಿದೆ. ಸಂಸ್ಥೆಯ ವಾಹನಗಳ ಕಾರ್ಯಾಚರಣೆ ವೆಚ್ಚಕ್ಕಿಂತ ಬಾಡಿಗೆಯಾಧಾರದ ವಾಹನಗಳ ಕಾರ್ಯಾಚರಣೆ ಚ್ಚ ಕಡಿಮೆಯಿದ್ದು; ವಾಹನಗಳ ಮೇಲಿನ ಬಂಡವಾಳ ಹೂಡಿಕೆ ಉಳಿತಾಯವಾಗುತ್ತದೆ:

10. ಪ್ರಯಾಣಿಕರನ್ನು ಆಕರ್ಷಿಸುವ ಸಲುವಾಗಿ ಕೆಲವು ಮಾರ್ಗಗಳಲ್ಲಿ **ಬ್ರಾಂಡೆಡ್** ಸೇವೆಗಳನ್ನು ಪ್ರಾರಂಭಿಸಲಾಗಿದೆ:

11. ಅನುಸೂಚಿ ಕಿ.ಮೀ. ರದ್ಧತಿ ಪ್ರಮಾಣ ಕಡಿಮೆ ಮಾಡಲು ಹಾಗೂ ಸಮಯಕ್ಕೆ ಸರಿಯಾಗಿ ಸಾರಿಗೆ ಕಾರ್ಯಾಚರಣೆ ಮಾಡಲು ಹಾಗೂ ಸಮಾನಾಂತರ ಕಾರ್ಯಾಚರಣೆ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ:

12. ಕಾರ್ಯಾಚರಣೆ ವೆಚ್ಚವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಹಳೇ ವಾಹನಗಳನ್ನು ರದ್ದುಗೊಳಿಸಿ ಹೊಸ ವಾಹನಗಳನ್ನು ವಾಹನಬಲಕ್ಕೆ ಸೇರ್ಪಡೆ ಮಾಡುವುದು.